ಸ್ವೀಕರಿಸಿರುತ್ತದೆ. ಮಾರ್ಗಸೂಚಿಯಲ್ಲಿ ಕಾಯ್ದಿರಿಸಿರುವಷ್ಟು ನಿವೇಶನಗಳನ್ನು ಹಂಚಿಕೆ ಮಾಡಲು ತೀರ್ಮಾನ ತೆಗೆದುಕೊಳ್ಳಲು ಈ ಅರ್ಜಿಗಳನ್ನು ಬಿಡಿ ನಿವೇಶನ ಹಂಚಿಕೆ ಸಮಿತಿಯ ಮುಂದೆ ಮಂಡಿಸಲಾಗುವುದು.

ಅನುಬಂಧ

ದಿನಾಂಕ 1.4.1995 ರಿಂದ 31.3.1998ರ ಅವಧಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬಿಡಿ ನಿವೇಶನ ಹಂಚಿಕೆ ಪಡೆದ ಸ್ವಾತಂತ್ರ ಯೋಧರ ಪಟ್ಟಿ :

ಶ್ರೀಯುತರು :

1. ಪಿ. ಚೆನ್ನಾರೆಡ್ಡಿ
2. ಹೆಚ್.ಕೆ. ಸಿದ್ದಲಿಂಗ ಶಾಸ್ತ್ರಿ
3. ಸಿ.ಆರ್. ಸುಬ್ಬಮ್ಮ
4. ಡಿ.ಜೆ. ನಾಯಿಡು
5. ಎಂ. ಮುನಿಸ್ವಾಮಯ್ಯ
6. ಕಾಶಿರಾವ್ ಪಾಟೀಲ್
7. ಅನಂತಚಾರ್ಯ
8. ಕೆ. ವೆಂಕಟ ಕೃಷ್ಣಪ್ಪ
9. ಎಂ. ನಂಜಪ್ಪ
10. ಟಿ.ಎಸ್. ಶ್ರೀರಂಗಾಚಾರ್
11. ಎಸ್. ನಂಜಪ್ಪ
12. ಬಸಪ್ಪ ಎನ್.ಕೋಡಿಗೌಡ
13. ಬಿ.ಎಂ. ಸಿದ್ದೇಗೌಡ
14. ಎನ್.ವಿ. ನಾರಾಯಣ ರಾವ್

ವಿಚಾರಣಾ ಆಯೋಗಗಳ ರಚನೆ

1275 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಐದು ವರ್ಷಗಳಲ್ಲಿ ರಾಜ್ಯ ಸರ್ಕಾರವು ರಚಿಸಿರುವ ವಿಚಾರಣಾ ಆಯೋಗಗಳ ಸಂಖ್ಯೆ ಎಷ್ಟು? (ಇಲಾಖಾವಾರು, ವಿಷಯವಾರು ಮಾಹಿತಿ ನೀಡುವುದು)

ಆ) ಹಾಗಿದ್ದಲ್ಲಿ ಈ ಆಯೋಗಗಳ ರಚನೆಯಾದ ನಂತರ ಸರ್ಕಾರಕ್ಕೆ ತಗಲಿರುವ ವೆಚ್ಚ ಎಷ್ಟು?

ಇ) ಆ ಆಯೋಗಗಳು ರಚನೆಯಾದ ನಂತರ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಲಿಕ್ಕೆ ತೆಗೆದುಕೊಂಡ ಕಾಲಾವಧಿ ಎಷ್ಟು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :

ಅ) 10 (ಹತ್ತು). ಇಲಾಖಾವಾರು, ವಿಷಯವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಅ) ರೂ. 1,38,04,898-00

ಇ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಕ್ರಮ ಸಂಖ್ಯೆ	ಇಲಾಖೆ	ಸರ್ಕಾರಕ್ಕೆ ವರದಿ ಸಲ್ಲಿಸಲು ತೆಗೆದುಕೊಂಡ ಕಾಲಾವಧಿ
1	2	3
	1. ಒಳಾಡಳಿತ ಮತ್ತು ಸಾರಿಗೆ	
1)	*ನ್ಯಾಯಮೂರ್ತಿ ಕೆ. ಜಗನ್ನಾಥ ಶೆಟ್ಟಿ ವಿಚಾರಣಾ ಆಯೋಗ.* ಏಪ್ರಿಲ್ 93ರ ನಂತರ ಭಟ್ಕಳ ನಗರದ ಗಲಭೆ ಪ್ರಕರಣ ಕುರಿತು	3 ವರ್ಷ, 5 ತಿಂಗಳು 11 ದಿವಸಗಳು
2)	*ನ್ಯಾಯಮೂರ್ತಿ ಬಿ.ಕೆ. ಸಂಗಲದ್ ವಿಚಾರಣ ಆಯೋಗ* ದಿನಾಂಕ 24.1.1994 ರಂದು ಗುಲ್ಬರ್ಗಾ ನಗರದಲ್ಲಿ ಪೋಲೀಸ್ ಬಲಪ್ರಯೋಗ ಕುರಿತು	1 ವರ್ಷ, 8 ತಿಂಗಳು 15 ದಿವಸಗಳು
3)	*ನ್ಯಾಯಮೂರ್ತಿ ಎಸ್.ಆರ್.ರಾಜಶೇಖರಮೂರ್ತಿ ವಿಚಾರಣಾ ಆಯೋಗ* ದಿನಾಂಕ 15.8.1994ರಂದು ಹುಬ್ಬಳ್ಳಿಯಲ್ಲಿ ನಡೆದ ಪೋಲೀಸ್ ಗೋಲಿಬಾರ್ ಬಗ್ಗೆ.	ವಿಚಾರಣಾ ಆಯೋಗವು ಪ್ರಗತಿಯಲ್ಲಿದೆ.
4)	*ನ್ಯಾಯಮೂರ್ತಿ ಮುರಳೀಧರ ರಾವ್ ವಿಚಾರಣಾ ಆಯೋಗ* ದಿನಾಂಕ 21.3.1995ರಂದು ಹುಬ್ಬಳ್ಳಿಯಲ್ಲಿ ನಡೆದ ಪೋಲೀಸ್ ಗೋಲಿಬಾರ್ ಬಗ್ಗೆ (ಹೋಳಿ ಪ್ರಕರಣ)	ವಿಚಾರಣಾ ಆಯೋಗವು ಪ್ರಗತಿಯಲ್ಲಿದೆ.
5)	*ನ್ಯಾಯಮೂರ್ತಿ ಬಿ.ಎನ್.ಕೃಷ್ಣನ್ ವಿಚಾರಣಾ ಆಯೋಗ* ಗೋಕಾಕ್ ತಾಲ್ಲೂಕು ಕೊಣ್ಣೂರ್ ಗ್ರಾಮದಲ್ಲಿ ನಡೆದ ಪೋಲೀಸ್ ಗೋಲಿಬಾರ್ ಕುರಿತು	2 ವರ್ಷ 8 ತಿಂಗಳು 28 ದಿವಸಗಳು
6)	*ನ್ಯಾಯಮೂರ್ತಿ ಎನ್.ಡಿ.ವಿ. ಭಟ್ ವಿಚಾರಣಾ ಆಯೋಗ* ದಿನಾಂಕ 14.11.1995ರಂದು ದೇವರಜೀವನ ಹಳ್ಳಿಯಲ್ಲಿರುವ ಡಾ:ಅಂಬೇಡ್ಕರ್ ವೈದ್ಯಕೀಯ ಕಾಲೇಜಿನಲ್ಲಿ ಡಾ:ಅಂಬೇಡ್ಕರ್ ಪ್ರತಿಮೆಗೆ ಅವಮಾನಗೊಳಿಸಿದ ಕುರಿತು	1 ವರ್ಷ 26 ದಿವಸಗಳು

1	2	3
7)	ನ್ಯಾಯಮೂರ್ತಿ ಎನ್.ಎಸ್. ಸಂಗೊಳ್ಳಿ ವಿಚಾರಣಾ ಆಯೋಗ ದಂತಚೋರ ವೀರಪ್ಪನ್ ಸಹಚರರಾದ ಅರ್ಜುನನ್, ಆಯ್ಯನ್ ದೊರೈ ಮತ್ತು ರಂಗಸ್ವಾಮಿ ಇವರ ಸಾವು ಕುರಿತು	9 ತಿಂಗಳು 27 ದಿವಸಗಳು
8)	ನ್ಯಾಯಮೂರ್ತಿ ಕೆ. ರಾಮಚಂದ್ರಯ್ಯ ವಿಚಾರಣಾ ಆಯೋಗ ದಿನಾಂಕ 10.4.1996ರಂದು ಡಾ।ಚಿತ್ತರಂಜನ್, ಶಾಸಕರು, ಭಟ್ಕಳ, ಇವರ ಸಾವಿನ ಬಗ್ಗೆ	1 ವರ್ಷ 11 ತಿಂಗಳು
9)	ನ್ಯಾಯಮೂರ್ತಿ ಡಿ.ಪಿ. ಹೀರೇಮಠ ವಿಚಾರಣಾ ಆಯೋಗ ರಾಮನಗರ ತಾಲ್ಲೂಕು ಹೆಜ್ಜಾಲದಲ್ಲಿ ದಿನಾಂಕ 3.2.97ರಂದು ರಸ್ತೆ ಗಲಭೆ ಮತ್ತು ಪೋಲೀಸ್ ಗೋಲಿಬಾರ್ ಕುರಿತು ಹಾಗೂ ಮುಳಬಾಗಿಲಿನಲ್ಲಿ ದಿನಾಂಕ 13-14.12.1996ರಂದು ಘರ್ಷಣೆ ಮತ್ತು ಪೋಲೀಸ್ ಗೋಲಿಬಾರ್ ಕುರಿತು.	ವಿಚಾರಣಾ ಆಯೋಗವು ಪ್ರಗತಿಯಲ್ಲಿದೆ.
2.	**ಲೋಕೋಪಯೋಗಿ**	
1)	ನ್ಯಾಯಮೂರ್ತಿ ಎಸ್. ಇಕ್ಬಾಲ್ ಅಹಮ್ಮದ್ ವಿಚಾರಣಾ ಆಯೋಗ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ ಸಂಸ್ಥೆಯ ಅವ್ಯವಹಾರಗಳ ಕುರಿತು ದಿನಾಂಕ 27.3.1997ರ ಸಂಖ್ಯೆ ಲೋಇ 46 ಸೇಇವಿ 95ರ ಅಧಿಸೂಚನೆಯಲ್ಲಿ ನೇಮಿಸಲಾಗಿದೆ.	ವಿಚಾರಣಾ ಆಯೋಗವು ಇನ್ನೂ ತನ್ನ ಕೆಲಸವನ್ನು ಪ್ರಾರಂಭಿಸಿರುವುದಿಲ್ಲ.

ಮೈಸೂರು ನಗರದಲ್ಲಿ ಪೋಲೀಸ್ ಠಾಣೆಗಳನ್ನು ತೆರೆಯುವುದು

1276 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಮೈಸೂರು ನಗರವು ದಿನೇ ದಿನೇ ಬೆಳೆಯುತ್ತಿದ್ದು, ಜನಸಂಖ್ಯೆಗನುಗುಣವಾಗಿ ಮೈಸೂರು ನಗರದಲ್ಲಿ ಹೊಸ ಪೋಲೀಸ್ ಠಾಣೆಗಳನ್ನು ತೆರೆಯುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೆ ?*

ಆ) *ಹಾಗಿದ್ದಲ್ಲಿ ಎಲ್ಲೆಲ್ಲಿ ತೆರೆಯಲಾಗುವುದು ?*